ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Friday, the 14th July 1972/Ashadha 23, 1894 (Saka Era)

The House met in the Assembly Chamber, Vidhana Soudha, at One of the Clock.

MADAM SPEAKER [SMT. K. S. NAGARATHNAMMA] in the Chair.

STARRED QUESTIONS

(to which oral Answers were given)

Construction of Shiradon Bridge

120. **Sri J. L. KABADE** (Ballolli).—

Will the Minister for Public Works and Electricity be pleased to state:—

(*a*) the estimated cost of the construction of Shiradon bridge on the State High Way near Bijapur-Pandarapura Road;

(*b*) when the estimate was prepared;

(*c*) the reasons for not taking up the said work so far?

Sri H. M. CHANNABASAPPA (Minister for Public Works and Electricity).—

(*a*) Detailed estimate has not yet been got up.

(*b*) Does not arise in view of reply to clause (*a*) above.

(*c*) Paucity of funds.

ಶ್ರೀ ಜೆ. ಎಲ್. ಕಬಾಡಿ.—ಈ ಸೇತುವೆಯನ್ನು ಮಾಡಬೇಕೆಂದು ಬಹು ದಿನಗಳಿಂದ ಕೇಳುತ್ತಿದ್ದರೂ ಸರ್ಕಾರದವರು ಇದಕ್ಕೆ ಗಮನ ಕೊಡದಿರಲು ಕಾರಣವೇನು?

†ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಉತ್ತರದಲ್ಲಿ "ಪಾಸಿಟಿ ಆಫ್ ಫಂಡ್ಸ್" ಎಂದು ಹೇಳಿದ್ದೇನೆ.

---

† Indicates that the remarks or speeches have not been revised by the member concerned.

ಶ್ರೀ ಜೆ. ಎಲ್. ಕಬಾಡಿ.—ಇದು ಅತೀ ಮುಖ್ಯವಾದ ಸೇತುವೆಯಾಗಿರುವುದರಿಂದ ಇದಕ್ಕೆ ಹಣ ಒದಗಿಸಿಕೊಡುವುದು ಸರ್ಕಾರದ ಮುಖ್ಯ ಧೋರಣೆಯಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಣ ಒದಗಿಸತಕ್ಕದ್ದು ಸರ್ಕಾರದ ಆಶಯವಾಗಿದೆ. ಆದರೆ ಇದಕ್ಕಿಂತಲೂ ಮುಖ್ಯವಾದವುಗಳು ಇದ್ದರೆ, ಆಗ ಇದಕ್ಕೆ ಸೆಕೆಂಡ್ ಪ್ರಿಫರೆನ್ಸ್ ಕೊಡಬೇಕಾಗುತ್ತದೆ.

ಶ್ರೀ ಜೆ. ಎಲ್. ಕಬಾಡಿ.—ಸೆಕೆಂಡ್ ಪ್ರಿಫರೆನ್ಸ್ ಎಂದು ತಿಳಿದುಕೊಂಡು ಕೈಬಿಡರಾಗಿದೆಯೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದುವರೆಗೆ ಅಂದಾಜು ಮಾಡಿದ್ದರಲ್ಲಿ ಸೆಕೆಂಡ್ ಪ್ರಿಫರೆನ್ಸ್ ಕೊಟ್ಟಿದ್ದಾರೆ. ಈಗ ಫರ್ಸ್ಟ್ ಪ್ರಿಫರೆನ್ಸ್ ಕೊಡುವುದಕ್ಕೆ ಸಾಧ್ಯವೇ ಎಂಬುದನ್ನು ಆಲೋಚನೆ ಮಾಡುತ್ತೇವೆ.

ಶ್ರೀ ಜೆ. ಎಲ್. ಕಬಾಡಿ.—ಏಕೆಂದರೆ ಇದು ವಿಜಾಪುರ-ಪಂಡರಾಪುರ ರಸ್ತೆಯ ಹತ್ತಿರ ಇದ್ದು ದೊಡ್ಡ ಯಾತ್ರಾಸ್ಥಳಗಳಿಗೆ ಹೋಗತಕ್ಕ ದಾರಿಯಲ್ಲಿದೆ ; ಅದಲ್ಲದೆ ಮುಂಬಾಯಿ-ಪೂನಾ ಮತ್ತು ವಿಜಾಪುರಕ್ಕೆ ಹೋಗುವ ದಾರಿಯಲ್ಲದೆ. ಆದ್ದರಿಂದ ಈ ವರ್ಷದಲ್ಲಿ ಕಟ್ಟುವುದಕ್ಕೆ ಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಬಹಳ ಪ್ರಾಮುಖ್ಯವಾದ ರಸ್ತೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಅದಲ್ಲದೆ ಪಂಡರಾಪುರ ಮುಂತಾದ ಯಾತ್ರಾಸ್ಥಳಗಳಿಗೆ ಉಪಯೋಗವಾಗ ತಕ್ಕ ರಸ್ತೆ ಎಂದೂ ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ ಸದಸ್ಯರು ಹೇಳತಕ್ಕ ವಿಚಾರಕ್ಕೆ ಸರ್ಕಾರದವರು ತೀವ್ರತೆಯನ್ನು ಕೊಟ್ಟು ಅದನ್ನು ಗಮನದಲ್ಲಿಟ್ಟುಕೊಳ್ಳುತ್ತಾರೆ.

Construction of Ayacut Roads in T. B. P. Area in Bellary District

187. **Sri B. E. RAMAIAH** (Siruguppa).—

Will the Minister of State for Major Irrigation be pleased to state:—

(*a*) whether it is a fact that the financial sanction was accorded for the construction of ayacut roads in T. B. Project area in Bellary District in 1960 ;

(*b*) if so, the reasons for not taking up the works so far ;

(*c*) when Government would complete all these roads ?

Sri H. N. NANJE GOWDA (Minister of State for Major Irrigation).—

(*a*) Yes.

(*b*) All the roads sanctioned since 1960 have been taken up and are in various stages of progress.

(*c*) By the end of March 1974 subject to availability of funds.

ಶ್ರೀ ಬಿ. ಇ. ರಾಮಯ್ಯ.—ಇದಕ್ಕೆ ಎಸ್ಟಿಮೇಟ್ ಏಷ್ಟು ಸ್ಯಾಂಕ್ಷನ್ ಮಾಡಿದ್ದೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ಒಟ್ಟು ರಸ್ತೆಗಳ ಉದ್ದ 177 ಮೈಲಿಗಳು. ಇದರಲ್ಲಿ 38 ಮೈಲಿ ಆಯಕಟ್ಟಿನ ರೈಟ್ ಬ್ಯಾಂಕ್ ಕೆಳಗಡೆ ತೆಗೆದುಕೊಳ್ಳಲಾಗುತ್ತಿದೆ ಅದರಲ್ಲಿ 24½ ಮೈಲಿ ರಸ್ತೆಯನ್ನು ರೆಗ್ಯುಲರ್ ಪಿ ಡಬ್ಲ್ಯು ಡಿಯವರು ವಹಿಸಿಕೊಂಡಿದ್ದಾರೆ. ಉಳಿದ 13½ ಮೈಲಿ 6 ಫರ್ಲಾಂಗಿಗೆ 86 ಲಕ್ಷದ 86 ಸಾವಿರ ಚಿಲ್ಲರೆ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ. ಇದುವರೆಗೂ 57 ಲಕ್ಷ ಖರ್ಚಾಗಿದೆ. ಉಳಿದುದನ್ನು 1974ರೊಳಗೆ ಖರ್ಚು ಮಾಡುವುದಕ್ಕೆ ಅಂದಾಜು ಮಾಡಲಾಗಿದೆ.

ಶ್ರೀ ಬಿ. ಇ. ರಾಮಯ್ಯ.—ಇದಕ್ಕೆ 14 ವರ್ಷವಾದರೂ ಇದುವರೆಗೂ ಪೂರ್ತಿಯಾಗದಿರುವುದಕ್ಕೆ ಕಾರಣವೇನು ? ಮೊದಲು 5 ವರ್ಷದೊಳಗೆ ಪೂರ್ತಿ ಮಾಡಬೇಕೆಂದು ಹೇಳುತ್ತಿದ್ದರು.